**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ**

**ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ ೧೮೭೦/೨೦೨೩ ಸಿ.ಡಬ್ಲ್ಯೂ–೧೮ ಪಿ.ಡಬ್ಲ್ಯೂ-೦೭

| | | |
|---|---|---|
| ಹೆಸರು | ಃ | ಸೈಯದ್ ಮೆಹಬೂಬ |
| ತಂದೆಃಗಂಡ | ಃ | ಸೈಯದ್ ಸೈನುದ್ದಿನ |
| ವಯಸ್ಸು | ಃ | ೬೦ ವರ್ಷ |
| ಉದ್ಯೋಗ | : | ನಿವೃತ್ತ ಪಿ.ಎಸ್.ಐ |
| ವಾಸಸ್ಥಳ | ಃ | ಕಲಬುರಗಿ |

ದಿನಾಂಕಃ ೦೬.೦೯.೨೦೨೫

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ನಾನು ಆಗಸ್ಟ ೦೧, ೨೦೨೦ ರಿಂದ ೩೦-೦೭-೨೦೨೨ ವರೆಗೆ ಪಿ.ಎಸ್.ಐ ತನಿಖೆ ಅಂತಾ ನರೋಣಾ ಪೋಲಿಸ ಠಾಣೆಯಲ್ಲಿ ಕಾರ್ಯ ನಿರ್ವಹಿಸಿದ್ದೇನೆ.

ದಿ. ೦೨-೦೪-೨೦೨೨ ರಂದು ನಾನು ಕಲಬುರಗಿ ಜಿಲ್ಲಾ ಆಸ್ಪತ್ರೆಯ ಶವಗಾರಕ್ಕೆ ಹೋಗಿ ಅಲ್ಲಿ ಈ ಪ್ರಕರಣದಲ್ಲಿ ಮೃತನಾದ ವಿಶಾಲ ತಂದೆ ಅಶೋಕರವರ ಅವರ ಮೃತ ದೇಹವನ್ನು ಅವರ ಚಾಸಾ ೧ ಮತ್ತು ೮ ರವರ ಮುಖಾಂತರ ಗುರುತಿಸಿಕೊಂಡು ಸದರಿ ಮೃತ ವ್ಯಕ್ತಿಯನ್ನು ನೋಡಿ ಪರಿಶೀಲಿಸಲಾಗಿ ಅವರ ಕಿವಿ ಮತ್ತು ತಲೆಗೆ ಗುಪ್ತಗಾಯ ಹಾಗೂ ತಲೆಯ ಹಿಂಬಾಗದಲ್ಲಿ ಗಂಭೀರವಾಗ ರಕ್ತಗಾಯವಾಗಿದ್ದು ಕಿವಿ ಮತ್ತು ಮೂಗಿನಿಂದ ರಕ್ತ ಸ್ರಾವವಾಗಿದ್ದು ಕಂಡು ಬಂದಿರುತ್ತದೆ. ನಂತರ ನಾನು ಇಬ್ಬರು ಪಂಚರು ಆದ ಚಾಸಾ ೪ ಮತ್ತು ೫ ಅವರ ಸಮಕ್ಷಮದಲ್ಲಿ ಶವ ಪಂಚನಾಮೆಯನ್ನು ೧೧.೪೫ ರಿಂದ ೧೨.೪೫ ಗಂಟೆಯವರೆಗೆ ಮಾಡಿ ನಮ್ಮ ಚಾಸಾ ೧೬ ರವರ ಮುಖಾಂತರ ಶವವನ್ನು ವೈಧ್ಯಾಧಿಕಾರಿಯವರಿಗೆ ಕಳುಹಿಸಿಕೊಟ್ಟಿರುತ್ತೇನೆ. ನಂತರ ಅವರು ಪರೀಕ್ಷೆ ಮಾಡಿ ಸಲ್ಲಿಸಿ ಶವ ಪರೀಕ್ಷಾ ವರದಿಯನ್ನು ಪಡೆದುಕೊಂಡಿರುತ್ತೇನೆ. ಗುನ್ನಾ ಸ್ಥಳಕ್ಕೆ ಹೋಗಿ ಅಲ್ಲಿ ಗುನ್ನಾ ಸ್ಥಳದ ಪಂಚನಾಮೆಯನ್ನು ಪಂಚರಾದ ಚಾಸಾ ೬ ಮತ್ತು ೭ ರವರ ಸಮಕ್ಷಮ ೪.೦೦ ಯಿಂದ ೫.೦೦ ವರೆಗೆ ಮಾಡಿ ಗುನ್ನಾ ಸ್ದಳದಿಂದ ಎರಡು ಮೋಟಾರ ಸೈಕಲಗಳಾದ ಕೆ ಎ ೨೫/ಇಸಿ-೬೬೯೫ ಮತ್ತು ಕೆ ಎ ೩೨/ಇಎಲ್-೮೭೧೯ ಇವುಗಳನ್ನು ವಶಕ್ಕೆಪಡೆದುಕೊಂಡು ಠಾಣೆಗೆ ಬಂದಿರುತ್ತೇನೆ. ಅದೇ ದಿನ ಕಲಬುರಗಿ ಜಿಲ್ಲಾ ಆಸ್ಪತ್ರೆಯಲ್ಲಿ ಚಾಸಾ ೨, ೮,

೯ ಅವರ ಹೇಳಿಕೆ ಪಡೆದುಕೊಂಡು, ನಂತರ  ಸನ್‌ರೈಸ್ ಆಸ್ಪತ್ರೆಯಲ್ಲಿ ಗಾಯಾಳು ಆದ ಚಾಸಾ ೩ ರವರ ಹೇಳಿಕೆಯನ್ನು ಪಡೆದುಕೊಂಡು ಠಾಣೆಗೆ ಬಂದುನಂತರ ಮುಂದಿನ ತನಿಖೆಗಾಗಿ ಚಾಸಾ ೧೯ ರವರಿಗೆ ಕಡತವನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ನಿಪಿ-೬ ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಹಿಯನ್ನು ನಿಪಿ-೬ ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಶವ ಪರೀಕ್ಷೆಗಾಗಿ ಕಳುಹಿಸಿದ ಮೃತ ದೇಹದೊಂದಿಗೆ ಸಲ್ಲಿಸತಕ್ಕ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-೦೯ ಎಂದು, ಸಾಕ್ಷಿಯ ಸಹಿಯನ್ನು ನಿಪಿ. ೯ ಎ ಎಂದು ಗುರುತಿಸಲಾಯಿತು. ಗುನ್ನಾ ಸ್ಥಳದ ಪಂಚಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. ೧೦ ಎಂದು, ಸಾಕ್ಷಿಯ ಸಹಿಯನ್ನು ನಿಪಿ. ೧೦ ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ನಾನು ಅಗಷ್ಟ ೦೧, ೨೦೨೦ ರಿಂದ ೩೦-೦೭-೨೦೨೨ ವರೆಗೆ ಪಿ.ಎಸ್.ಐ ತನಿಖೆ ಅಂತಾ ನರೋಣಾ ಪೋಲಿಸ ಠಾಣೆಯಲ್ಲಿ ಕಾರ್ಯನಿರ್ವಹಿಸಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿ. ೦೨-೦೪-೨೦೨೨ ರಂದು ನಾನು ಕಲಬುರಗಿ ಜಿಲ್ಲಾ ಆಸ್ಪತ್ರೆಯ ಶವಗಾರಕ್ಕೆ ಹೋಗಿ ಅಲ್ಲಿ ಈ ಪ್ರಕರಣದಲ್ಲಿ ಮೃತನಾದ ವಿಶಾಲ ತಂದೆ ಅಶೋಕರವರ ಅವರ ಮೃತ ದೇಹವನ್ನು ಅವರ ಚಾಸಾ ೧ ಮತ್ತು ೮ ರವರ ಮುಖಾಂತರ ಗುರುತಿಸಿಕೊಂಡು  ಸದರಿ ಮೃತ ವ್ಯಕ್ತಿಯನ್ನು ನೋಡಿ ಪರಿಶೀಲಿಸಲಾಗಿ ಅವರ ಕಿವಿ ಮತ್ತು ತಲೆಗೆ ಗುಪ್ತಗಾಯ ಹಾಗೂ ತಲೆಯ ಹಿಂಬಾಗದಲ್ಲಿ ಗಂಬಿರವಾಗ ರಕ್ತಗಾಯವಾಗಿದ್ದು ಕಿವಿ ಮತ್ತು ಮೂಗಿನಿಂದ ರಕ್ತ ಸ್ರಾವವಾಗಿದ್ದು ಕಂಡು ಬಂದಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ನಂತರ ನಾನು  ಇಬ್ಬರು ಪಂಚರು ಆದ ಚಾಸಾ ೪ ಮತ್ತು ೫ ಅವರ ಸಮಕ್ಷಮದಲ್ಲಿ ಶವಪಂಚನಾಮೆಯನ್ನು ೧೧.೪೫ ರಿಂದ ೧೨.೪೫ ರವರೆಗೆ ಮಾಡಿ ನಮ್ಮ ಚಾಸಾ ೧೬ ರವರ ಮುಖಾಂತರ ಶವವನ್ನು ವೈಧ್ಯಾಧಿಕಾರಿಯವರಿಗೆ ಕಳುಹಿಸಿಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ನಂತರ ಅವರು ಪರೀಕ್ಷೆ ಮಾಡಿ ಸಲ್ಲಿಸಿ ಶವ ಪರೇಕ್ಷಾ ವರದಿಯನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗುನ್ನಾ ಸ್ಥಳಕ್ಕೆ ಹೋಗಿ ಅಲ್ಲಿ ಗುನ್ನಾ ಸ್ಥಳದ ಪಂಚನಾಮೆಯನ್ನು ಪಂಚರಾದ ಚಾಸಾ ೬ ಮತ್ತು ೭ ರವರ ಸಮಕ್ಷಮ ೪.೦೦ ಗಂಟೆಯಿಂದ ೫.೦೦ ವರೆಗೆ  ಮಾಡಿ

ಗುನ್ನಾ ಸ್ಥಳದಿಂದ ಎರಡು ಮೋಟಾರ ಸೈಕಲಗಳಾದ ಕೆ ಎ ೨೫/ಇಸಿ-೬೬೯೫ ಮತ್ತು ಕೆ ಎ ೩೨/ಇಎಲ್-೮೭೧೯ ಇವುಗಳನ್ನು ವಶಕ್ಕೆ ಪಡೆದುಕೊಂಡು ಠಾಣೆಗೆ ಬಂದಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ಕಲಬುರಗಿ ಜಿಲ್ಲಾ ಆಸ್ಪತ್ರೆಯಲ್ಲಿ ಚಾಸಾ ೨, ೮, ೯ ಅವರ ಹೇಳಿಕೆ ಪಡೆದುಕೊಂಡು, ನಂತರ  ಸನ್‌ರೈಸ್ ಆಸ್ಪತ್ರೆಯಲ್ಲಿ ಗಾಯಾಳು ಆದ ಚಾಸಾ ೩ ರವರ ಹೇಳಿಕೆಯನ್ನು ಪಡೆದುಕೊಂಡು ಠಾಣೆಗೆ ಬಂದುನಂತರ ಮುಂದಿನ ತನಿಖೆಗಾಗಿ ಚಾಸಾ ೧೯ ರವರಿಗೆ ಕಡತವನ್ನು ಸಲ್ಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇರುವುದಿಲ್ಲ.**

ಓ.ಹೇ.ಕೇ.ಸರಿ ಇದೆ.

ಸಿ.ಸಿ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.